**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ</u>**

**ನ್ಯಾಯಿಕ ದಂಡಧಿಕಾರಿಗಳ ನ್ಯಾಯಾಲಯ, ಕುಷ್ಟಗಿ**

**ಸಿ ಸಿ ಸಂಖ್ಯೆಃ 1458/2022 ಸಿಡಬ್ಲ್ಯೂ ಃ 5**

**ಪಿಡಬ್ಲ್ಯೂ ಃ 2**

**ಸಾಕ್ಷಿದಾರರ ಹೆಸರು ಃ ನಸೀಮ**

**ತಂದೆಯ ಹೆಸರು ಃ ಕಲ್ಲಪ್ಪ ಮಮದಾಪೂರ**

**ವಯಸ್ಸು ಃ 46 ವರ್ಷ**

**ಉದ್ಯೋಗ ಃ ಕುರಿ ಸಾಕಾಣಿಕೆ**

**ವಾಸ ಃ ಅಕ್ಕೊಳ**

**ದಿನಾಂಕಃ 27.09.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ</u>**

**1.** ನಿಪಿ 1 ರಲ್ಲಿ ನನ್ನ ಸಹಿ ಇದೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 1 ಬಿ ಎಂದು ಗುರುತಿಸಲಾಯಿತು. ನಿಪಿ 4 ಸ್ಥಳ ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿಯು ತನ್ನ ಸಹಿಯನ್ನು ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 4 ಬಿ ಎಂದು ಗುರುತಿಸಲಾಯಿತು. ನಿಪಿ 5 ಮತ್ತು 6 ರಲ್ಲಿ ನಾನು ಇದ್ದೇನೆ.

2. ಅಪಘಾತ ಕುರಿತು ದಿನಾಂಕ 13.08.2022 ರಂದು ನನಗೆ 6 ಗಂಟೆಗೆ ಫೋನು ಬಂದಿದ್ದು ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಯಲ್ಲಪ್ಪ ಮೃತ ಪಟ್ಟಿದ್ದ. ಹಾಗೂ ಸಿದ್ದಪ್ಪನ ಕುರಿಗಳು ಸತ್ತಿದ್ದವು ಹಾಗೂ ಗಾಯಗೊಂಡಿದ್ದವು. ಸ್ಥಳದಲ್ಲಿ ಪೊಲೀಸರು ನಾನು ಮತ್ತು ಚಾಸಾ 4 ರವರು ಸಾಕ್ಷಿಯಾಗಿ ನೋಡಿದ ಕುರಿತು ನಿಪಿ 4 ಕ್ಕೆ ಸಹಿ

ಮಾಡಿರುತ್ತೇನೆ. ಮಧ್ಯಾಹ್ನ 03 ರಿಂದ 4.30 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತಾರೆ. ನಮ್ಮ ಮುಂದೆಯೇ ಗಾಡಿ ಸಂಖ್ಯೆ ಕೆಎ 20/ಡಿ 7745 ನ್ನು ಪೊಲೀಸರು ಬರೆದುಕೊಂಡು ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ. ನಾವು ನಮ್ಮ ಆಧಾರ ಕಾರ್ಡ ನೀಡಿ ಸಹಿ ಮಾಡಿರುತ್ತೇವೆ. ಬಿಳಿ ಬಣ್ಣದ ಅರಿಶಿಣ ಮಿಶ್ರಿತ ಲಾರಿ ಇತ್ತು. ಸಾಕ್ಷಿಯು ನಿಪಿ 9 ರಲ್ಲಿರುವ ಲಾರಿ ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಎ ಪಿ  ವಕೀಲರಿಂದಃ</u>**

1. ಚಾಸಾ  1 ನನ್ನ ಸಂಬಂಧಿಕ. ಮೃತ ಯಲ್ಲಪ್ಪ ನಮ್ಮ ಪಕ್ಕದ ಗ್ರಾಮದವನು. ಸದರಿ ದಿನ ನಾನು ಕುರಿ ಹಿಂಡಿನ ಜೊತೆ ಹೋಗಿಲ್ಲ. ಚಾಸಾ  1 ರವರು ನನಗೆ ಪೋನು ಮಾಡಿದ್ದರು. ನಾನು ಆ ಸಮಯದಲ್ಲಿ ಬಂಡಿ ಕ್ರಾಸ ಬಳಿ ಕುರಿ ಜೊತೆ ಇದ್ದೆ. ತಕ್ಷಣ ನಾನು ಘಟನಾ ಸ್ಥಳಕ್ಕೆ ಬಂದಿರುತ್ತೇನೆ. ನಾನು ಹೋದಾಗ ಪೊಲೀಸರು ಬಂದಿದ್ದರು. ಆಗ 06.45 ಗಂಟೆ ಆಗಿತ್ತು. ನಾನು ಹೋದಾಗ ಲಾರಿ ಮತ್ತು ಅದರ ಚಾಲಕ ಇದ್ದರು.
2. ಮೃತನನ್ನು ನಾವೇ ಆಸ್ಪತ್ರೆಗೆ ಗಾಡಿಯಲಿಲ ತಂದಿರುತ್ತೇವೆ. ಆ ಸಮಯದಲ್ಲಿ ಪೊಲೀಸರು ಸಹ ಇದ್ದರು. ದೂರನ್ನು ಠಾಣೆಯಲ್ಲಿ ಬರೆದುಕೊಟ್ಟಿರುತ್ತೇನೆ. ದೂರು ಬರೆಯಲು ಚಾಸಾ  1 ರವರು ಮಾಹಿತಿ ನೀಡಿರುತ್ತಾರೆ. ದೂರಿಗೆ ನಾನು ಮತ್ತು ಚಾಸಾ  1 ರವರು ಸಹಿ ಮಾಡಿರುತ್ತೇವೆ. ಪಂಚನಾಮೆಯನ್ನು ವೀರುಪಾಕ್ಷಪ್ಪ ಎಂಬ ಬರಹಗಾರರು ಬರೆದುಕೊಂಡಿರುತ್ತಾರೆ. ಪೊಲೀಸರು ಘಟನೆಗೆ ಸಂಬಂಧಿಸಿದಂತೆ 2 ಸಹಿ ಪಡೆದಿರುತ್ತಾರೆ. ಪಂಚನಾಮೆಗೆ ನಾನು, ಚಾಸಾ 1 ಮತ್ತು 4 ಸಹಿ ಮಾಡಿರುತ್ತೇವೆ. ಸದರಿ ದಿನ ಪೊಟೊಗಳನ್ನು ಪೊಲೀಸರು 4.00 ಗಂಟೆಗೆ ತೆಗೆದಿರುತ್ತಾರೆ.
3. ಘಟನಾ ಸ್ಥಳದ ಪೂರ್ವ ಮತ್ತು ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಗಾರ್ಡನ, ದಕ್ಷಿಣಕ್ಕೆ ತಿಮ್ಮಣ್ಣ ಎಂಬುವರ ಹೊಲ. ಆ ಸಮಯದಲ್ಲಿ ತಿಮ್ಮಣ್ಣ ಅವರು ಬಂದಿದ್ದು ಆತನೇ ತಾನು ಹೊಲದ ಮಾಲೀಕ ಎಂದು ಹೇಳಿರುತ್ತಾನೆ. ಆ ಸಮಯದಲ್ಲಿ ಒಂದು

ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಮಾಡಲು ಪೊಲೀಸರು ನಮ್ಮನ್ನು ಕರೆದುಕೊಂಡು ಹೊಗಿರುತ್ತಾರೆ. ಪಂಚನಾಮೆಗೆ ನಮ್ಮ ಸಂಬಂಧಿಕರು ಸಹಿ ಮಾಡಿರುತ್ತಾರೆ.

4. ನನಗೂ ಸೇರಿದ ಕುರಿಗಳು ಸಹ ಇವೆ. ಚಾಸಾ 1 ರವರು ಠಾಣೆಯಲ್ಲಿ ನನಗೆ ಘಟನೆಯ ಕುರಿತು ಹೇಳಿದ್ದು ಆತ ಹೇಳಿದಂತೆ ನಾನು ದೂರು ಬರೆದಿರುತ್ತೇನೆ. ತಡ ಆದ ಕಾರಣ ಚಾಸಾ 1 ರವರು ಕಾರಣ ಹೇಳಿ ಬರೆಸಿಲ್ಲ.

5. ನಾನು ಸದರಿ ದಿನ ಪಂಚನಾಮೆ ಸ್ಥಳಕ್ಕೆ ಹೋಗಿಲ್ಲ, ಠಾಣೆಯಲ್ಲಿ ಪೊಲೀಸರ ಮಾತು ಕೇಳಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ರವರು ನನಗೆ ಏನು ಮಾಹಿತಿ ನೀಡದಿದ್ದರೂ ಸಹ ನಾನೇ ಸುಳ್ಳು ದೂರು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಪಂಚನಾಮೆಗೆ ಚಾಸಾ 1 ರವರು ಒಬ್ಬರೇ ಮಾಹಿತಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು, ಚಾಸಾ 1, ಮತ್ತು ಮೃತ ವ್ಯಕ್ತಿ ಒಂದೇ ಊರಿನವರಾದ ಕಾರಣ ಮೃತ ವ್ಯಕ್ತಿಯ ಕುಟುಂಬದ ಪರಿಹಾರಕ್ಕಾಗಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಪೊಟೊಗಳು ಪಂಚನಾಮೆಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ.ಕೇ. ಸರಿ ಇದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ**